ಸಹಕಾರಿ ಸಂಘಗಳ ಮೂಲಕ ಮಾರಾಟ ಮಾಡಿದ ಆಹಾರ ಧಾನ್ಯಗಳ ಮೇಲೆ ಸಹಾಯ ಧನದ ಬಗ್ಗೆ

ಳಟಿಟಿ. ಶ್ರೀ ಜಿ.ಎಸ್. ಆಚಾರ್ (ಬೈಂದೂರು).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಆಹಾರ ಧಾನ್ಯಗಳನ್ನು ಸಹಕಾರ ಸಂಘಗಳ ಮೂಲಕ ನಿಯಂತ್ರಿತ ಮಾರುಕಟ್ಟೆಯಲ್ಲಿ ಮಾರಾಟ ಮಾಡಿ ಬೆಳೆ ಸಾಲಕ್ಕೆ ಪಜಾ ಮಾಡಿದಲ್ಲಿ ಬಡ್ಡಿಯಲ್ಲಿ ಶೇಕಡ ೫ ರಷ್ಟು ಸಬ್ಸಿಡಿ ನೀಡುವ ಸರ್ಕಾರದ ೧೯೮೪-೮೫ನೇ ವರ್ಷದಲ್ಲಿ ರಾಜ್ಯದ ಯಾವ ಜಿಲ್ಲೆಗಳಲ್ಲಿ ಎಷ್ಟೆಷ್ಟು ಸಬ್ಸಿಡಿ ನೀಡಲಾಗಿದೆ ?

ಆ) ಇದನ್ನು ಹೆಚ್ಚಿನ ಪ್ರಮಾಣದಲ್ಲಿ ಪಡೆಯಲು ರೈತರಿಗಿರುವ ತೊಂದರೆಗಳೇನು ?

ಇ) ಅವುಗಳ ಪರಿಹಾರಕ್ಕೆ ಸರ್ಕಾರದವರು ಪರ್ಯಾಲೋಚಿಸುವರೇ ?

ಶ್ರೀ ಆರ್.ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು),—

ಅ) ೧೯೮೪-೮೫ನೇ ಆರ್ಥಿಕ ಸಾಲಿನಲ್ಲಿ ಈ ಯೋಜನೆಯಲ್ಲಿ ಯಾವ ಬೆಳ್ಚವನ್ನು ಮಾಡಿಲ್ಲ.

ಆ) ಪ್ರಾಥಮಿಕ ಕೃಷಿ ಸಹಕಾರ ಸಂಘಗಳ ಮೂಲಕ ಆಹಾರ ಧಾನ್ಯಗಳನ್ನು ರೈತರು ಮಾರಿದಲ್ಲಿ ಮಾತ್ರ ಈ ಯೋಜನೆಯಲ್ಲಿ ಸಹಾಯ ಧನವು ಸಿಗುತ್ತದೆ. ಮಾರಾಟವಾದ ತಕ್ಷಣ ಪ್ರಾಥಮಿಕ ಕೃಷಿ ಸಹಕಾರ ಸಂಘವು ಉತ್ಪನ್ನದ ಮಾರಾಟ ಬೆಲೆಯ ಶೇಕಡ ೫ ರಷ್ಟನ್ನು ಸಹಾಯಧನವಾಗಿ ಸೇರಿಸುತ್ತದೆ. ಮತ್ತು ಒಟ್ಟು ಮೊಬಲಗಿನಿಂದ ರೈತರಿಂದ ಬರಬೇಕಾದ ಸಾಲಕ್ಕೆ ಹೊಂದಾಣಿಕೆ ಮಾಡಿ ಉಳಿದ ಮೊತ್ತವನ್ನು ರೈತರಿಗೆ ಕೊಡುತ್ತದೆ. ಕೃಷಿ ಸಹಕಾರ ಸಂಘವು ಮಾರಾಟದಿಂದ ಬಂದ ಮೊತ್ತದಿಂದ ತಮ್ಮ ಸಾಲಗಳನ್ನು ಪಡೆದುಕೊಳ್ಳುವುದಕ್ಕೆ ರೈತರು ಇಷ್ಟ ಪಡದಿರುವುದರಿಂದ ಅವರು ಸಹಾಯ ಧನವು ಸಿಗುತ್ತಿದ್ದಾಗ್ಯೂ ಕೂಡ ಈ ಯೋಜನೆಯ ಸೌಲಭ್ಯವನ್ನು ಪಡೆದುಕೊಂಡಿಲ್ಲ ಮತ್ತು ಮುಕ್ತ ಮಾರುಕಟ್ಟೆಯಲ್ಲಿ ತಮ್ಮ ಆಹಾರ ಧಾನ್ಯಗಳನ್ನು ಮಾರಲು ಹೋಗುತ್ತಿದ್ದಾರೆ.

ಇ) ಸರ್ಕಾರ ಮಂತ್ರಿ ಇಲಾಖೆಯು ಇಲಾಖೆಯ ಅಧಿಕಾರಿಗಳಿಗೆ ಮತ್ತು ಸಹಕಾರ ಸಂಸ್ಥೆಗಳಿಗೆ ಯೋಜನೆ ಯಸೌಲಭ್ಯಗಳ ಬಗ್ಗೆ ರೈತರಿಗೆ ತಿಳುವಳಿಕೆ ನೀಡಲು ಕಾಲಕಾಲಕ್ಕೆ ಸೂಚನೆಗಳನ್ನು ಕೊಟ್ಟಿದೆ.

ವಿದ್ಯುಚ್ಛಕ್ತಿ ಸರಬರಾಜು ಬಗ್ಗೆ

೧೨೪೫. ಶ್ರೀ ಬಿ.ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ವಿದ್ಯುಚ್ಛಕ್ತಿ, ಗಣಿ ಹಾಗೂ ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ತರೀಕೆರೆ ತಾಲ್ಲೂಕಿನಲ್ಲಿ ವಿದ್ಯುಚ್ಛಕ್ತಿ ಸರಬರಾಜು ಇಲ್ಲದಿರುವ ಗ್ರಾಮಗಳ ಸಂಖ್ಯೆ ಎಷ್ಟು ?

ಆ) ಈ ಗ್ರಾಮಗಳಿಗೆ ವಿದ್ಯುತ್ ಸರಬರಾಜು ಮಾಡಲು ಏನು ಕ್ರಮ ಕೈಗೊಳ್ಳಲಾಗಿದೆ ?

ಶ್ರೀ ಜೆ.ಎಸ್. ದೇಶಮುಖ್ (ವಿದ್ಯುತ್, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು).—

ಅ) ತರೀಕೆರೆ ತಾಲ್ಲೂಕಿನಲ್ಲಿ ೩೧-೧೨-೮೫ರ ವೇಳೆಗೆ ವಿದ್ಯುದ್ದೀಕರಣವಾಗದ ೨೪ ಗ್ರಾಮಗಳಿವೆ.

ಆ) ತರೀಕೆರೆ ತಾಲ್ಲೂಕಿನಲ್ಲಿ ಉಳಿದಿರುವ ಎಲ್ಲಾ ಗ್ರಾಮಗಳ ವಿದ್ಯುದ್ದೀಕರಣ, ನೀರಾವರಿ ಪಂಪು ಸೆಟ್ಟುಗಳಿಗೆ ವಿದ್ಯುತ್ ಸರಬರಾಜಿಗಾಗಿ ಒಂದು ಆರ್.ಇ.ಪಿ. ಯೋಜನೆ ತಯಾರಿಸಲಾಗುತ್ತಿದೆ. ಇದಕ್ಕೆ ಶೀಘ್ರದಲ್ಲೇ ಮಂಜೂರಾತಿ ಪಡೆದು ೧೯೮೬-೮೭ನೇ ಸಾಲಿನಲ್ಲಿ ಕಾರ್ಯಾರಂಭ ಮಾಡಲಾಗುತ್ತದೆ. ಏಳನೆಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಪೂರ್ಣಗೊಳಿಸಲಾಗುವುದು.

ಉತ್ತರ ಕನ್ನಡ ಜಿಲ್ಲೆಯ ಅಣು ವಿದ್ಯುತ್ ಕೇಂದ್ರ ಸ್ಥಾಪಿಸುವ ಬಗ್ಗೆ

೧೨೫೬. ಶ್ರೀ ಎನ್.ಎಂ. ಅಡ್ಯಂತಾಯ.—ಮಾನ್ಯ ವಿದ್ಯುತ್, ಗಣಿ ಹಾಗೂ ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?